# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1384 (1592) |
| ಸದಸ್ಯರ ಹೆಸರು | ಶ್ರೀ ಕಿಶೋರ್ ಕುಮಾರ್ ಪುತ್ತೂರ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 19.12.2025 |
| ಉತ್ತರಿಸುವ ಸಚಿವರು | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಗ್ರಾಮೀಣ ಭಾಗದಲ್ಲಿನ ಏಕ ನಿವೇಶನ ಮತ್ತು ಬಹು ನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ಅಧಿಕಾರವನ್ನು ನಗರ ಸ್ಥಳೀಯ ಯೋಜನಾ ಪ್ರಾಧಿಕಾರಗಳಿಗೆ ಹಸ್ತಾಂತರಿಸಿದ ನಂತರ ಸದರಿ ಪ್ರಾಧಿಕಾರಗಳಿಗೆ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಎಷ್ಟು; ವಿನ್ಯಾಸ ಅನುಮೋದನೆ ನೀಡಿದ, ತಿರಸ್ಕರಿಸಿದ ಮತ್ತು ಅನುಮೋದನೆಗೆ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; (ಸ್ಥಳೀಯ ಯೋಜನಾ ಪ್ರಾಧಿಕಾರವಾರು ಮಾಹಿತಿ ನೀಡುವುದು); | • ರಾಜ್ಯದ ಗ್ರಾಮೀಣ ಭಾಗದಲ್ಲಿ ಸ್ಥಳೀಯ ಯೋಜನಾ ಪ್ರಾಧಿಕಾರವನ್ನು ಘೋಷಿಸಿರುವುದಿಲ್ಲ.<br>• ಸ್ಥಳೀಯ ಯೋಜನಾ ಪ್ರದೇಶವನ್ನು ನಗರ/ಪಟ್ಟಣ ಸ್ಥಳೀಯ ಸಂಸ್ಥೆಗಳಿಗೆ ಘೋಷಿಸಲಾಗುತ್ತಿದೆ.<br>• ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಎ ರನ್ವಯ ರಾಜ್ಯ ಸರ್ಕಾರವು, ರಾಜ್ಯದ ಯಾವುದೇ ಪ್ರದೇಶವನ್ನು ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಿದ ನಂತರ ಕಲಂ 4-ಸಿ ರನ್ವಯ ಸದರಿ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಒಂದು ಪ್ರಾಧಿಕಾರವನ್ನು ರಚಿಸಿದ ನಂತರ, ಸದರಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯೊಳಗೆ ಬರುವ ಏಕ ನಿವೇಶನ ಮತ್ತು ಬಹು ನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ಅಧಿಕಾರವು ಸದರಿ ಯೋಜನಾ ಪ್ರಾಧಿಕಾರಕ್ಕೆ ಇರುತ್ತದೆ.<br>• ರಾಜ್ಯದ ಗ್ರಾಮೀಣ ಭಾಗಕ್ಕೆ ಕರ್ನಾಟಕ ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: DPAL 36 SHASANA 2021, BENGALURU, ದಿನಾಂಕ: 07-10-2021 ರಲ್ಲಿ ರಾಜ್ಯದಲ್ಲಿ ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗದಿರುವ ಪ್ರದೇಶಗಳಲ್ಲಿ ಯೋಜನಾಬದ್ಧ ಬೆಳವಣಿಗೆಗಳಿಗಾಗಿ ರಾಜ್ಯ ಸರ್ಕಾರದಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2021 ರನ್ವಯ ಕಲಂ 4-ಕೆ ಯನ್ನು ಸೇರ್ಪಡೆಗೊಳಿಸಲಾಗಿದ್ದು, ಅದಕ್ಕೆ ಪೂರಕವಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ 16 ಟಿಟಿಪಿ 2023(E), ದಿನಾಂಕ: 07-05-2025 ರನ್ವಯ |

| | | |
|---|---|---|
| | | ಸ್ಥಳೀಯ ಯೋಜನಾ ಪ್ರದೇಶ (LPA) ದ ವ್ಯಾಪ್ತಿಯ ಹೊರಭಾಗದಲ್ಲಿ ಬರುವ ಅಭಿವೃದ್ಧಿಗಳನ್ನು ನಿಯಂತ್ರಿಸಲು ಹಾಗೂ ತಾಂತ್ರಿಕ ಅನುಮೋದನೆ ನೀಡಲು ನಿಯಮಾವಳಿಗಳನ್ನು ರಚಿಸಲಾಗಿರುತ್ತದೆ.<br>• ಸದರಿ ಅಧಿಸೂಚನೆಯು ಜಾರಿಯಾದ ದಿನಾಂಕದಿಂದ (4-ಕೆ ಜಾರಿಯಾದ ದಿನಾಂಕ:19.05.2025 ರಿಂದ 16.12.2025 ರವರೆಗೆ) ರಾಜ್ಯದ ಗ್ರಾಮೀಣ ಭಾಗದಲ್ಲಿನ ಏಕ ನಿವೇಶನ ಮತ್ತು ಬಹು ನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ, ವಿನ್ಯಾಸ ಅನುಮೋದನೆ ನೀಡಿದ, ತಿರಸ್ಕರಿಸಿದ ಮತ್ತು ಅನುಮೋದನೆಗೆ ಬಾಕಿ ಇರುವ ಅರ್ಜಿಗಳ ಸಂಖ್ಯೆಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. |
| (ಆ) | ಸ್ಥಳೀಯ ನಗರ ಯೋಜನಾ ಪ್ರಾಧಿಕಾರಗಳಲ್ಲಿ ವಿನ್ಯಾಸ ಅನುಮೋದನೆ ನೀಡಲು ವಿಳಂಬವಾಗಿ ಗ್ರಾಮೀಣ ಜನರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸದರಿ ಅರ್ಜಿಗಳ ವಿಲೇವಾರಿಗೆ ಮೇಲುಸ್ತುವಾರಿ ವಹಿಸಲು ಸರ್ಕಾರ ಯಾರನ್ನು ನೇಮಿಸಿದೆ; ಸದರಿ ಅರ್ಜಿಗಳನ್ನು ಸಕಾಲ ವ್ಯಾಪ್ತಿಗೆ ಒಳಪಡಿಸಲಾಗಿದೆಯೇ; ಇಲ್ಲವಾಗಿದ್ದಲ್ಲಿ ಕಾರಣವೇನು; ಸದರಿ ಅರ್ಜಿಗಳ ವಿಲೇವಾರಿಗೆ ಸರ್ಕಾರ ನಿಗದಿಪಡಿಸಿರುವ ಗರಿಷ್ಟ ಅವಧಿ ಎಷ್ಟು; | • ರಾಜ್ಯದ ಗ್ರಾಮೀಣ ಭಾಗದಲ್ಲಿ ಸ್ಥಳೀಯ ಯೋಜನಾ ಪ್ರಾಧಿಕಾರವನ್ನು ಘೋಷಿಸಿರುವುದಿಲ್ಲ.<br>• ರಾಜ್ಯದ ಗ್ರಾಮೀಣ ಭಾಗಕ್ಕೆ ಕರ್ನಾಟಕ ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: DPAL 36 SHASANA 2021, BENGALURU, ದಿನಾಂಕ: 07-10-2021 ರಲ್ಲಿ ರಾಜ್ಯದಲ್ಲಿ ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗದಿರುವ ಪ್ರದೇಶಗಳಲ್ಲಿ ಯೋಜನಾಬದ್ಧ ಬೆಳವಣಿಗೆಗಳಿಗಾಗಿ ರಾಜ್ಯ ಸರ್ಕಾರದಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2021 ರನ್ವಯ ಕಲಂ 4-ಕೆ ಯನ್ನು ಸೇರ್ಪಡೆಗೊಳಿಸಲಾಗಿದ್ದು, ಅದಕ್ಕೆ ಪೂರಕವಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ 16 ಟಿಟಿಪಿ 2023(E), ದಿನಾಂಕ: 07-05-2025 ರನ್ವಯ ಸ್ಥಳೀಯ ಯೋಜನಾ ಪ್ರದೇಶ (LPA) ದ ವ್ಯಾಪ್ತಿಯ ಹೊರಭಾಗದಲ್ಲಿ ಬರುವ ಅಭಿವೃದ್ಧಿಗಳನ್ನು ನಿಯಂತ್ರಿಸಲು ಹಾಗೂ ತಾಂತ್ರಿಕ ಅನುಮೋದನೆ ನೀಡಲು ನಿಯಮಾವಳಿಗಳನ್ನು ರಚಿಸಲಾಗಿರುತ್ತದೆ. ಸದರಿ ನಿಯಮಾವಳಿಗಳನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರ ಭಾಗದಲ್ಲಿನ ಗ್ರಾಮ ಪಂಚಾಯತಿಗಳಿಗೆ ಅರ್ಜಿದಾರರು ಪ್ರಸ್ತಾವನೆಯನ್ನು ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸಬೇಕು, ಸದರಿ ಗ್ರಾಮ ಪಂಚಾಯಿತಿಗಳು ದಾಖಲೆಗಳನ್ನು ಅರ್ಜಿದಾರರಿಂದ ಪಡೆದ ನಂತರ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಸಹಾಯಕ |

| | | |
|---|---|---|
| | | ನಿರ್ದೇಶಕರ ಕಛೇರಿಗೆ ಸಲ್ಲಿಸಬೇಕು, ನಂತರ ಗ್ರಾಮ ಪಂಚಾಯತಿಗಳಿಂದ ಸ್ವೀಕೃತವಾದ ಪ್ರಸ್ತಾವನೆಗಳನ್ನು ಪರಿಶೀಲಿಸಿ, ನಿಯಮಾನುಸಾರವಿರುವ ಪ್ರಸ್ತಾವನೆಗಳಿಗೆ ನಿಗಧಿತ ಅವಧಿಯಲ್ಲಿ ತಾಂತ್ರಿಕ ಅನುಮೋದನೆ ನೀಡಿ ಇತ್ಯರ್ಥಗೊಳಿಸಿ, ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ಹಿಂದಿರುಗಿಸಲಾಗುತ್ತದೆ.<br>• ಇಲಾಖೆಯ ಶಾಖಾ ಕಛೇರಿಗಳನ್ನು ವಿಭಾಗೀಯ ಕಛೇರಿ ಮಟ್ಟದಲ್ಲಿ ಕಾಲ ಕಾಲಕ್ಕೆ ಪರಿಶೀಲನೆ ನಡೆಸಿ ನಿಗಧಿತ ಅವಧಿಯಲ್ಲಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಕ್ರಮ ವಹಿಸಲಾಗುತ್ತಿದೆ.<br>• ಆದಾಗ್ಯೂ ರಾಜ್ಯಕ್ಕೆ ಅನ್ವಯಿಸುವಂತೆ ಏಕ / ಬಹು ನಿವೇಶನ ವಿನ್ಯಾಸ ಅನುಮೋದನೆ ನೀಡುವ ಕುರಿತು ನಿಯಮಗಳನ್ನು ಸಮನ್ವಯಗೊಳಿಸಲು ಮತ್ತು ಅನುಮೋದನಾ ಪ್ರಕ್ರಿಯೆಯನ್ನು ಸುಗಮಗೊಳಿಸಲು ಹಾಗೂ ವಿನ್ಯಾಸ ಅನುಮೋದನೆಯನ್ನು ಪಾರದರ್ಶಕತೆ ಹಾಗೂ ಜನಸ್ನೇಹಿಯಾಗಿಸಲು ಅನುವಾಗುವಂತೆ Centre for E-Governance ವತಿಯಿಂದ Unified Land Management System (ULMS) ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗುತ್ತಿದೆ.<br>• ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ ರಡಿಯಲ್ಲಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಗಡೆಯಲ್ಲಿ ಬರುವ ಅಭಿವೃದ್ಧಿಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಗಳಿಂದ ಸ್ವೀಕರಿಸಿದ ಅರ್ಜಿಗಳನ್ನು, ಸ್ವೀಕರಿಸಿದ ದಿನಾಂಕದಿಂದ 60 ದಿನಗಳೊಳಗೆ ತಾಂತ್ರಿಕ ಅನುಮೋದನೆ ನೀಡಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ ರವರಿಂದ ದಿನಾಂಕ:12.09.2025 ರಂದು ಸುತ್ತೋಲೆ ಹೊರಡಿಸಲಾಗಿದೆ **(ಅನುಬಂಧ-2).** |
| (ಇ) | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಸೆಕ್ಷನ್ 64ಕ್ಕೆ ತಿದ್ದುಪಡಿ ತಂದು ಗ್ರಾಮೀಣ ಭಾಗದ ಏಕ ಮತ್ತು ಬಹು ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಅಧಿಕಾರವನ್ನು | • ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ನ್ನು ಉಲ್ಲಂಘಿಸಿ, ಗ್ರಾಮ ಪಂಚಾಯಿತಿಗಳಿಂದ/ನಗರ ಸ್ಥಳೀಯ ಸಂಸ್ಥೆಗಳಿಂದ ವಿನ್ಯಾಸ ಅನುಮೋದಿಸುತ್ತಿರುವುದನ್ನು ತಡೆಗಟ್ಟುವ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ |

| | | |
|---|---|---|
| | ಪುನಃ ಗ್ರಾಮ ಪಂಚಾಯತಿಗಳಿಗೆ ನೀಡುವ ಪ್ರಸ್ತಾವನೆ ಅಥವಾ ಯೋಚನೆ ಸರ್ಕಾರದ ಮುಂದಿದೆಯೇ; ಸದರಿ ಅಧಿಕಾರವನ್ನು ಗ್ರಾಮ ಪಂಚಾಯತಿಗಳಿಗೆ ನೀಡಲು ಸರ್ಕಾರಕ್ಕೆ ಇರುವ ತೊಂದರೆ ಏನು? | ದಾಖಲಾದ ರಿಟ್ ಅರ್ಜಿ ಸಂಖ್ಯೆ:19033/2023 ರಲ್ಲಿ, ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ:15-11-2023 ರಂದು ನೀಡಿರುವ ದೈನಂದಿನ ಆದೇಶದಂತೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ ಉಲ್ಲಂಘನೆಯಾಗದಂತೆ ಹಾಗೂ ಗ್ರಾಮ ಪಂಚಾಯತಿ/ತಾಲ್ಲೂಕು ಪಂಚಾಯತಿಗಳಲ್ಲಿ ತಾಂತ್ರಿಕ ಸಿಬ್ಬಂದಿಗಳು ಇಲ್ಲದಿರುವುದನ್ನು ಮನಗೊಂಡು ಸರ್ಕಾರವು ಆದೇಶ ಸಂಖ್ಯೆ: ನಅಇ 93 ಎಂಡಬ್ಲ್ಯೂಪಿ 2023 (ಭಾ-1), ದಿನಾಂಕ:09-01-2024 ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 93 ಎಂಡಬ್ಲ್ಯೂಪಿ 2023 (ಭಾ-1), ದಿನಾಂಕ:28-08-2024 ರಲ್ಲಿ ವಿನ್ಯಾಸ ಅನುಮೋದನೆಗೆ ವಹಿಸಬೇಕಾದ ಕ್ರಮದ ಬಗ್ಗೆ ಆದೇಶ ಹೊರಡಿಸಲಾಗಿರುತ್ತದೆ.<br><br>• ಸ್ಥಳೀಯ ಯೋಜನಾ ಪ್ರದೇಶದ ಹೊರಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4- ಕೆ ರ ಅವಕಾಶದಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಅಥವಾ ಅಧಿಕೃತ ಅಧಿಕಾರಿಯು ವಿನ್ಯಾಸ ಅನುಮೋದಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತಾರೆ. ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ನಗರಾಭಿವೃದ್ಧಿ ಪ್ರಾಧಿಕಾರಗಳು/ ಯೋಜನಾ ಪ್ರಾಧಿಕಾರಗಳನ್ನು ಹೊರತುಪಡಿಸಿ ಗ್ರಾಮ ಪಂಚಾಯಿತಿಗಳು/ನಗರ ಸ್ಥಳೀಯ ಸಂಸ್ಥೆಗಳು ವಿನ್ಯಾಸ ಅನುಮೋದನೆ ನೀಡಲು ಅವಕಾಶವಿರುವುದಿಲ್ಲ.<br><br>ಮೇಲ್ಕಂಡ ಕಾಯ್ದೆ ಹಾಗೂ ಆದೇಶಗಳನ್ವಯ ಗ್ರಾಮ ಪಂಚಾಯತಿಗಳು ವಿನ್ಯಾಸ ಅನುಮೋದಿಸಲು ಅವಕಾಶವಿರುವುದಿಲ್ಲ. |

ಕಡತ ಸಂಖ್ಯೆ:ನಅಇ 549 ಮೈಅಪ್ರಾ 2025

**(ಬಿ.ಎಸ್.ಸುರೇಶ)**

ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

## ಅನುಬಂಧ-1

### ರಾಜ್ಯ ಗ್ರಾಮೀಣ ಭಾಗದಲ್ಲಿನ ಏಕ ನಿವೇಶನ ಮತ್ತು ಬಹು ನಿವೇಶನ ವಿನ್ಯಾಸ ನಕ್ಷೆ ಅನುಮೋದನೆಗೆ ಸಲ್ಲಿಕೆಯಾದ ಅರ್ಜಿಗಳ ವಿವರಗಳು

### (ಕೆ.ಟಿ.ಸಿ.ಪಿ. ಕಾಯ್ದೆ, 1961ರ ಕಲಂ 4-ಕೆ ನಿಯಮಾವಳಿ ಜಾರಿಯಾದ ದಿನಾಂಕ:19.05.2025 ರಿಂದ ಈವರೆಗೆ)

| ಕ್ರ. ಸಂ. | ಸಹಾಯಕ ನಿರ್ದೇಶಕರ ಕಛೇರಿಗಳ ಹೆಸರು | ಸಲ್ಲಿಕೆಯಾದ ಒಟ್ಟು ಅರ್ಜಿಗಳ ಸಂಖ್ಯೆ | | ವಿನ್ಯಾಸ ಅನುಮೋದನೆ ನೀಡಿದ ಅರ್ಜಿಗಳ ಸಂಖ್ಯೆ | | ತಿರಸ್ಕರಿಸಿದ ಅರ್ಜಿಗಳ ಸಂಖ್ಯೆ | | ಅನುಮೋದನೆಗೆ ಬಾಕಿ ಇರುವ ಅರ್ಜಿಗಳ ಸಂಖ್ಯೆ | | ಷರಾ |
|---|---|---|---|---|---|---|---|---|---|---|
| | | ಏಕ ನಿವೇಶನ | ಬಹು ನಿವೇಶನ | ಏಕ ನಿವೇಶನ | ಬಹು ನಿವೇಶನ | ಏಕ ನಿವೇಶನ | ಬಹು ನಿವೇಶನ | ಏಕ ನಿವೇಶನ | ಬಹು ನಿವೇಶನ | |
| 1 | ಚಿತ್ರದುರ್ಗ | 175 | 48 | 87 | 18 | 2 | - | 31 | 15 | ಅಗತ್ಯ ದಾಖಲೆಗಳನ್ನು ಸಲ್ಲಿಸದೆ ಇರುವ ಸಂಬಂಧ 70 ಪ್ರಕರಣಗಳನ್ನು ವಿಲೇ ಇಡಲಾಗಿದೆ. |
| 2 | ಚಿಕ್ಕಬಳ್ಳಾಪುರ | 103 | 44 | 35 | 21 | 26 | 10 | 37 | 18 | ಒಟ್ಟು 55 ಪ್ರಕರಣಗಳಿಗೆ ಅಗತ್ಯ ದಾಖಲಾತಿಗಳನ್ನು ಸಲ್ಲಿಸಲು ಸೂಚಿಸಿ ಪತ್ರ ಬರೆಯಲಾಗಿರುತ್ತದೆ. |
| 3 | ದಾವಣಗೆರೆ | 178 | 17 | 86 | 8 | 43 | 2 | 49 | 7 | ಬಾಕಿ ಇರುವ ಒಟ್ಟು 49 ಏಕ ನಿವೇಶನ ಪ್ರಕರಣಗಳಲ್ಲಿ ಮಾಹಿತಿ/ದಾಖಲೆ ಕೋರಿ ಪತ್ರ ಬರೆದ ಪ್ರಕರಣಗಳ ಸಂಖ್ಯೆ -29 , ಇತ್ತೀಚಿಗೆ ಸ್ವೀಕೃತವಾದ ಪ್ರಕರಣಗಳ ಸಂಖ್ಯೆ- 20<br>ಬಾಕಿ ಇರುವ ಒಟ್ಟು 07 ಬಹು ನಿವೇಶನ ಪ್ರಕರಣಗಳಲ್ಲಿ ಮಾಹಿತಿ/ದಾಖಲೆ ಕೋರಿ ಪತ್ರ ಬರೆದ ಪ್ರಕರಣಗಳ ಸಂಖ್ಯೆ -05 ಇತ್ತೀಚಿಗೆ ಸ್ವೀಕೃತವಾದ ಪ್ರಕರಣಗಳ ಸಂಖ್ಯೆ-02 |
| 4 | ಕೋಲಾರ | 62 | 31 | 20 | 7 | 5 | 0 | 41 | 20 | ಏಕ ನಿವೇಶನ<br>31- ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ವಿಲೇ ಪಡಿಸಲಾಗಿರುತ್ತದೆ.<br>10 - ದಾಖಲೆ ಕೋರಲಾಗಿರುತ್ತದೆ.<br>ಬಹು ನಿವೇಶನ<br>5- ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ವಿಲೇ ಪಡಿಸಲಾಗಿರುತ್ತದೆ.<br>15 - ದಾಖಲೆ ಕೋರಲಾಗಿರುತ್ತದೆ. |
| 5 | ಶಿವಮೊಗ್ಗ | 86 | 19 | 61 | 11 | 2 | 0 | 23 | 8 | |
| 6 | ತುಮಕೂರು | 144 | 38 | 111 | 19 | 5 | 3 | 28 | 16 | ಅಗತ್ಯ ದಾಖಲೆಗಳನ್ನು ಕೋರಿ ಹಿಂಬರಹ ನೀಡಲಾಗಿದೆ. |
| 7 | ಬಾಗಲಕೋಟೆ | 45 | 60 | 15 | 24 | 17 | 15 | 15 | 19 | ಬಾಕಿ ಇರುವ ಪ್ರಕರಣಗಳಲ್ಲಿ 20 ಪ್ರಕರಣಗಳು ಮಾಹಿತಿ |

| | | | | | | | | | | |
|---|---|---|---|---|---|---|---|---|---|---|
| | | | | | | | | | | ಕೋರಿದ್ದು, ಉಳಿದ 14 ಪ್ರಕರಣಗಳು ಪರಿಶೀಲನಾ ಹಂತದಲ್ಲಿರುತ್ತದೆ |
| 8 | ಜಮಖಂಡಿ | 34 | 21 | 13 | 2 | 11 | 13 | 10 | 6 | 16 ಬಾಕಿ ಇರುವ ಪ್ರಕರಣಗಳ ಪೈಕಿ 5 ವಲಯ ಕಚೇರಿಗೆ ಕಳುಹಿಸಲಾಗಿದೆ 9 Demarcation Plan ನೀಡಲಾಗಿದೆ ಮತ್ತು ಉಳಿದ 2 ಪ್ರಕರಣಗಳು ಪರಿಶೀಲನೆ ಹಂತದಲ್ಲಿರುತ್ತವೆ |
| 9 | ಬೆಳಗಾವಿ | 59 | 38 | 23 | 10 | 18 | 9 | 21 | 12 | ಅಗತ್ಯ ದಾಖಲೆಗಳನ್ನು ಕೋರಿ ಹಿಂಬರಹ ನೀಡಲಾಗಿದೆ |
| 10 | ನಿಪ್ಪಾಣಿ | 81 | 41 | 17 | 24 | 22 | 20 | 32 | 7 | 39 ಬಾಕಿ ಇರುವ ಪ್ರಕರಣಗಳ ಪೈಕಿ 20 Demarcation Plan ನೀಡಲಾಗಿದೆ. ಮತ್ತು ಉಳಿದ 19 ಪ್ರಕರಣಗಳಿಗೆ ಅಗತ್ಯ ದಾಖಲೆಗಳನ್ನು ಕೋರಿ ಪತ್ರ ಬರೆಯಲಾಗಿರುತ್ತದೆ |
| 11 | ವಿಜಯಪುರ | 44 | 52 | 22 | 15 | 5 | 4 | 16 | 34 | ಒಟ್ಟು 50 ಪ್ರಕಣಗಳಿಗೆ ಅಗತ್ಯ ದಾಖಲೆ ಕೋರಿ ಹಿಂಬರಹ ನೀಡಲಾಗಿತ್ತು. ಆದರೆ ಅರ್ಜಿದಾರರು ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ವಿಲೆಪಡಿಸಲಾಗಿದೆ. |
| 12 | ಧಾರವಾಡ | 19 | 21 | 7 | 13 | 3 | 1 | 9 | 7 | ಅನುಮೋದನೆಗಾಗಿ ಬಾಕಿ ಇರುವ ಕಡತಗಳಿಗೆ ಹಿಂಬರಹ ನೀಡಲಾಗಿದೆ. |
| 13 | ಗದಗ-ಬೆಟಗೇರಿ | 12 | 64 | 6 | 12 | 2 | 17 | 4 | 35 | ಬಾಕಿ ಇರುವ ಪ್ರಕರಣಗಳ ಪೈಕಿ 5 ವಲಯ ಕಚೇರಿಗೆ ಕಳುಹಿಸಲಾಗಿದೆ ಮತ್ತು ಉಳಿದ 34 ಪ್ರಕರಣಗಳು ಪರಿಶೀಲನೆ ಹಂತದಲ್ಲಿರುತ್ತವೆ |
| 14 | ಹಾವೇರಿ | 67 | 43 | 40 | 19 | 18 | 13 | 9 | 11 | "ಬಾಕಿ ಇರುವ ಪ್ರಕರಣಗಳ ಪೈಕಿ 3 ವಲಯ ಕಚೇರಿಗೆ ಕಳುಹಿಸಲಾಗಿದೆ ಮತ್ತು ಉಳಿದ 17ಪ್ರಕರಣಗಳು ಪರಿಶೀಲನೆ ಹಂತದಲ್ಲಿರುತ್ತವೆ" |
| 15 | ಕಾರವಾರ | 218 | - | 92 | - | 5 | - | 8 | - | ಒಟ್ಟು 113 ಪ್ರಕಣಗಳಿಗೆ ಅಗತ್ಯ ದಾಖಲೆ ಕೋರಿ ಹಿಂಬರಹ ನೀಡಲಾಗಿತ್ತು. ಆದರೆ ಅರ್ಜಿದಾರರು ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ವಿಲೆಪಡಿಸಲಾಗಿದೆ. |
| 16 | ಶಿರಸಿ | 21 | 10 | 10 | 8 | 3 | 0 | 0 | 2 | ಒಟ್ಟು 08 ಪ್ರಕಣಗಳಿಗೆ ಅಗತ್ಯ ದಾಖಲೆ ಕೋರಿ ಹಿಂಬರಹ ನೀಡಲಾಗಿತ್ತು. ಆದರೆ ಅರ್ಜಿದಾರರು ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ವಿಲೆಪಡಿಸಲಾಗಿದೆ. |
| 17 | ಬೀದರ್ | 56 | 19 | 13 | 30 | 6 | 6 | 2 | 6 | ಒಟ್ಟು 12 ಪ್ರಕರಣಗಳಿಗೆ ಅಗತ್ಯ ದಾಖಲೆ ಕೋರಿ ಹಿಂಬರಹ ನೀಡಲಾಗಿದೆ. |

| | | | | | | | | | | |
|---|---|---|---|---|---|---|---|---|---|---|
| 18 | ಬಳ್ಳಾರಿ | 25 | 41 | 15 | 15 | 4 | 8 | 6 | 18 | 8 ಪ್ರಕರಣಗಳು ಪರಿಶೀಲನಾ ಹಂತದಲ್ಲಿರುತ್ತವೆ |
| 19 | ವಿಜಯನಗರ | 27 | 160 | 18 | 94 | 1 | 3 | 3 | 20 | ಅಗತ್ಯ ದಾಖಲೆಗಳನ್ನು ಸಲ್ಲಿಸದೆ ಇರುವ ಸಂಬಂಧ 48 ಪ್ರಕರಣಗಳನ್ನು ವಿಲೇಪಡಿಲಾಗಿರುತ್ತದೆ |
| 20 | ಕಲಬುರಗಿ | 90 | 51 | 41 | 28 | 34 | 15 | 15 | 8 | ಒಟ್ಟು 49 ಪ್ರಕಣಗಳಿಗೆ ಅಗತ್ಯ ದಾಖಲೆ ಕೋರಿ ಹಿಂಬರಹ ನೀಡಲಾಗಿದೆ. 23 ಪ್ರಕರಣಗಳು ಪರಿಶೀಲನೆ ಹಂತದಲ್ಲಿರುತ್ತವೆ |
| 21 | ಕೊಪ್ಪಳ | 91 | 365 | 44 | 176 | 36 | 147 | 11 | 42 | ಬಾಕಿ ಕಡತಗಳನ್ನು ದಾಖಲಾತಿ ಸಲ್ಲಿಸಲು ಹಿಂಬರಹ ನೀಡಿದೆ |
| 22 | ರಾಯಚೂರು | 92 | 66 | 41 | 27 | 37 | 24 | 17 | 12 | ಒಟ್ಟು 29 ಪ್ರಕರಣಗಳಲ್ಲಿ 15 ಅಗತ್ಯ ದಾಖಲೆ ಕೋರಿದೆ &14 ಪ್ರಕರಣಗಳು ಇತ್ತೀಚಿಗೆ ಸ್ವೀಕೃತವಾಗಿರುತ್ತವೆ |
| 23 | ಯಾದಗಿರಿ | 23 | 30 | 21 | 18 | 1 | 7 | 3 | 3 | ಒಟ್ಟು 8 ಪ್ರಕರಣಗಳಿಗೆ ಅಗತ್ಯ ದಾಖಲೆ ಕೋರಿ ಹಿಂಬರಹ ನೀಡಲಾಗಿದೆ.<br>6 ಪ್ರಕರಣಗಳು ಪರಿಶೀಲನಾ ಹಂತದಲ್ಲಿರುತ್ತವೆ |
| 24 | ಚಾಮರಾಜನಗರ | 42 | 18 | 26 | 12 | 5 | - | 11 | 6 | ಒಟ್ಟು 17 ಪ್ರಕಣಗಳಿಗೆ ಅಗತ್ಯ ದಾಖಲೆ ಕೋರಿ ಹಿಂಬರಹ ನೀಡಲಾಗಿದೆ. |
| 25 | ಚಿಕ್ಕಮಗಳೂರು | 464 | 12 | 260 | 11 | 38 | 0 | 154 | 1 | ಅನುಮೋದನೆಗಾಗಿ ಬಾಕಿ ಇರುವ ಕಡತಗಳಿಗೆ ಹಿಂಬರಹ ನೀಡಲಾಗಿದೆ. |
| 26 | ಮಂಗಳೂರು | 1183 | 7 | 483 | 1 | 141 | 2 | 62 | 4 | 66-ಪ್ರಕರಣಗಳು ಕಾಲ ಮಿತಿಯಲ್ಲಿದ್ದು ಪರಿಶೀಲನೆ ಹಂತದಲ್ಲಿರುತ್ತವೆ. ಒಟ್ಟು 497 ಪ್ರಕರನಗಳಿಗೆ ಅಗತ್ಯ ದಾಖಲೆ ಕೋರಿ ಹಿಂಬರಹ ನೀಡಲಾಗಿದೆ. ಒಟ್ಟು 484 ಪ್ರಕರನಗಳಿಗೆ ಶುಲ್ಕ ಪಾವತಿಗೆ ತಿಳಿಸಲಾಗಿದೆ. |
| 27 | ಹಾಸನ | 94 | 20 | 46 | 13 | 32 | 2 | 16 | 5 | ಬಾಕಿ ಕಡತಗಳನ್ನು ದಾಖಲಾತಿ ಸಲ್ಲಿಸಲು ಹಿಂಬರಹ ನೀಡಿದ |
| 28 | ಮಡಿಕೇರಿ | 479 | 20 | 414 | 17 | 22 | 0 | 43 | 3 | ಒಟ್ಟು 43 ಏಕ ವಿನ್ಯಾಸ ಕಡತಗಳು ಹಾಗು 3 ಬಹು ವಿನಾಸ ಕಡತಗಳು ಪರಿಶೀಲನೆ ಹಂತದಲ್ಲಿರುತ್ತದೆ |
| 29 | ಮಂಡ್ಯ | 526 | 20 | 84 | 3 | 94 | 0 | 338 | - | |
| 30 | ಮೈಸೂರು | 63 | 43 | 45 | 40 | 18 | 1 | 0 | 2 | ಬಾಕಿ ಕಡತಗಳನ್ನು ದಾಖಲಾತಿ ಸಲ್ಲಿಸಲು ಹಿಂಬರಹ ನೀಡಿದ |
| 31 | ಉಡುಪಿ | 675 | 0 | 357 | 0 | 107 | 0 | 102 | 0 | ಒಟ್ಟು216 ಕಡತಗಳು ಹಿಂಬರಹ ನೀಡಲಾಗಿದ್ದು, ದಾಖಲಾತಿ ಸಲ್ಲಿಸಲು ಬಾಕಿ ಉಳಿದಿರುತ್ತದೆ ಬಹುನಿವೇಶನ ಯಾವುದೇ ಪ್ರಸ್ತಾವನೆಗಳು ಸ್ವೀಕೃತಿಯಾಗಿರುವುದಿಲ್ಲ. |

| | | | | | | | | | | |
|---|---|---|---|---|---|---|---|---|---|---|
| 32 | ಪುತ್ತೂರು ಯೋಜನಾ ಪ್ರಾಧಿಕಾರ | 430 | - | 233 | - | 150 | - | 57 | - | (ಪುತ್ತೂರು - 17 ಕಡತಗಳ ಸ್ಥಳ ಪರಿಶೀಲನೆ ಬಾಕಿ ಇರುತ್ತದೆ. 10 ಶುಲ್ಕ ಪಾವತಿಗೆ ನೋಟೀಸ್ ನೀಡಲಾಗಿದೆ) (ಕಡಬ- 30 ಕಡತಗಳ ಸ್ಥಳ ಪರಿಶೀಲನೆ ಬಾಕಿ ಇರುತ್ತದೆ) |
| 33 | ಬಂಟ್ವಾಳ ಯೋಜನಾ ಪ್ರಾಧಿಕಾರ | 441 | - | 262 | - | 77 | - | 102 | - | - |
| 34 | ಸುಳ್ಯ ಯೋಜನಾ ಪ್ರಾಧಿಕಾರ | 148 | - | 71 | - | 15 | - | 62 | - | 27 ಪ್ರಕರಣಗಳು ಕಾಲಮಿತಿಯಲ್ಲಿದ್ದು, ಪರಿಶೀಲನೆ ಹಂತದಲ್ಲಿರುತ್ತದೆ. ಒಟ್ಟು 15 ಪ್ರಕರಣಗಳಿಗೆ ಅಗತ್ಯ ದಾಖಲೆ ಕೋರಿ ಹಿಂಬರಹ ನೀಡಲಾಗಿದೆ. ಒಟ್ಟು 20 ಪ್ರಕರಣಗಳಿಗೆ ಶುಲ್ಕ ಪಾವತಿಗೆ ತಿಳಿಸಲಾಗಿದೆ. |
| 35 | ಮೂಡುಬಿದ್ರೆ ಯೋಜನಾ ಪ್ರಾಧಿಕಾರ | 1375 | - | 384 | - | 72 | - | 869 | - | ಅನುಮೋದನೆಗೆ ಬಾಕಿ ಇರುವ ಅರ್ಜಿಗಳ ಪೈಕಿ ದಾಖಲೆಗಳನ್ನು ಕೋರಿ 827 ಕಡತಗಳಿಗೆ ಹಿಂಬರಹ ನೀಡಲಾಗಿದೆ. |
| 36 | ಕುಂದಾಪುರ ಯೋಜನಾ ಪ್ರಾಧಿಕಾರ | 823 | - | 604 | - | 76 | - | 29 | - | ದಾಖಲೆಗಳನ್ನು ಕೋರಿ ಹಿಂಬರಹ ನೀಡುವ ಅರ್ಜಿಗಳ ಸಂಖ್ಯೆ114 |
| 37 | ಕಾಪು ಯೋಜನಾ ಪ್ರಾಧಿಕಾರ | 836 | - | 328 | - | 288 | - | 92 (ದಾಖಲೆಗಳನ್ನು ಸಲ್ಲಿಸಲು, ಸ್ಥಳ ಪರಿಶೀಲನೆಗೆ, ಶುಲ್ಕ ಪಾವತಿಸಲು ಬಾಕಿ ಇರುವ ಕಡತಗಳು) | - | ಹಿಂಬರಹ ನೀಡಿರುವ ಅರ್ಜಿ ಸಂಖ್ಯೆ:128 |
| 38 | ಶಿರಸಿ ಯೋಜನಾ ಪ್ರಾಧಿಕಾರ | 31 | - | 19 | - | 10 | - | 2 | - | - |

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ

ನಗರಾಭಿವೃದ್ಧಿ ಪ್ರಾಧಿಕಾರಗಳು & ನಗರ ಮತ್ತು
ಗ್ರಾಮಾಂತರ ಯೋಜನಾ ಆಯುಕ್ತಾಲಯ
ಬಹುಮಹಡಿಗಳ ಕಟ್ಟಡ, ಗೇಟ್-4, ಪಿ.ಬಿ.ನಂ.5257,
ಡಾ. ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು-560001.

**ಕರ್ನಾಟಕ ಸರ್ಕಾರ**

**ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ.**

ಬಹುಮಹಡಿಗಳ ಕಟ್ಟಡ, ಗೇಟ್-4, ಪಿ.ಬಿ.ನಂ.5257, ಡಾ: ಬಿ.ಆರ್ ಅಂಬೇಡ್ಕರ್ ವೀಧಿ. ಬೆಂಗಳೂರು-560001
ದೂರವಾಣಿ ಸಂಖ್ಯೆ: 22253976, 22353976, ಇ-ಮೈಲ್: commissionerudatcp@gmail.com ವೆಬ್‌ಸೈಟ್: www.dtcp.gov.in

ಸಂಖ್ಯೆ: DTCP/TECH0CIRC/7/2025 (E-1911084)/2133 12 SEP 2025

# ಸುತ್ತೋಲೆ

**ವಿಷಯ:** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ ರಡಿಯಲ್ಲಿ ಕರಾವಳಿ ಭಾಗದಲ್ಲಿನ ಏಕನಿವೇಶನ (01ಎಕರೆವರೆಗೆ) ವಿನ್ಯಾಸಗಳಿಗೆ ಅನುಮೋದನೆ ನೀಡುವ ಸಂಬಂಧ ಅನುಸರಿಸಬೇಕಾದ ಕಾರ್ಯ ವಿಧಾನದ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ 16 ಟಿಟಿಪಿ 2023(E), ದಿನಾಂಕ:07-05-2025.
2. ಸರ್ಕಾರದ ಆದೇಶ ಸಂಖ್ಯೆ: ನಅಇ 292 ಮೈಅಪ್ರಾ 2024, ದಿನಾಂಕ: 07-08-2024
3. ಕರಾವಳಿ ಭಾಗದ ಜಿಲ್ಲೆಗಳಲ್ಲಿ ವಸತಿ ಮತ್ತು ವಾಣಿಜ್ಯ ಭೂ ಪರಿವರ್ತಿತ ಜಮೀನುಗಳ ಏಕನಿವೇಶನ ವಿನ್ಯಾಸಗಳಿಗೆ ಅನುಮೋದನೆ ನೀಡುವ ಸಮಸ್ಯೆಗಳ ಬಗ್ಗೆ, ಸನ್ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ದಿನಾಂಕ:12-08-2025 ರಂದು ಜರುಗಿದ ಸಭೆ.

*****

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ ರಡಿಯಲ್ಲಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಗಡೆಯಲ್ಲಿ ಬರುವ ಅಭಿವೃದ್ಧಿಗಳನ್ನು ಯೋಜನಾಬದ್ಧವಾಗಿ ರೂಪಿಸುವ ಸಂಬಂಧ ಉಲ್ಲೇಖ (1) ರಲ್ಲಿ ಸರ್ಕಾರದಿಂದ ನಿಯಮಗಳಿಗೆ ಅಧಿಸೂಚನೆ ಹೊರಡಿಸಲಾಗಿದೆ. ಕರಾವಳಿ ಭಾಗದಲ್ಲಿನ ಸಾರ್ವಜನಿಕರು ವಿನ್ಯಾಸ ಅನುಮೋದನೆ ಪಡೆಯುವ ಸಂಬಂಧ ಜಿಲ್ಲಾ ಕೇಂದ್ರದವರೆಗೆ ಬರಬೇಕಾಗಿದ್ದು, ಸದರಿ ಸಮಸ್ಯೆಯನ್ನು ನಿವಾರಿಸಲು, ಜಿಲ್ಲೆಯಲ್ಲಿನ ವಿವಿಧ ಯೋಜನಾ ಪ್ರಾಧಿಕಾರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸುವ ಸಂಬಂಧ, ಸರ್ಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-K ಹಾಗೂ 76K ರಡಿ ಪ್ರದತ್ತವಾದ ಅಧಿಕಾರದನ್ವಯ, ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡದೇ ಇರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಒಂದು (01) ಎಕರೆ ಒಳಗಿನ ಜಮೀನುಗಳಿಗೆ ಅನುಮೋದನೆ ನೀಡುವ ಪ್ರಕರಣಗಳಿಗೆ ಉಲ್ಲೇಖ (2) ರಲ್ಲಿ ತಾಂತ್ರಿಕ ಅನುಮೋದನೆ ನೀಡಲು ಯೋಜನಾ ಪ್ರಾಧಿಕಾರಗಳಿಗೆ ಸರ್ಕಾರದಿಂದ ಅಧಿಕಾರ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ. ಆದಾಗ್ಯೂ ಕರಾವಳಿ ಭಾಗದಲ್ಲಿನ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿಗಳಲ್ಲಿ ಕೆಲಸ ನಿರ್ವಹಿಸಲು ಮಧ್ಯವರ್ತಿಗಳ ಹಾವಳಿಗಳು ಹೆಚ್ಚಾಗಿರುವುದರಿಂದ ಕಛೇರಿಯ ಕೆಲಸ ಕಾರ್ಯಗಳಿಗೆ ಅಡಚಣೆ ಉಂಟಾಗುತ್ತಿರುವ ಬಗ್ಗೆ ಹಾಗೂ ವಿನ್ಯಾಸ ಅನುಮೋದನೆಗೆ ಸಲ್ಲಿಸಬೇಕಾದ ದಾಖಲೆಗಳ ಬಗ್ಗೆ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿರುವ ಕುರಿತು ಉಲ್ಲೇಖ (3) ರ ಸನ್ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಗಿರುತ್ತದೆ. ಸದರಿ ದಾಖಲೆಗಳನ್ನು ಪಡೆಯುವ ಬಗ್ಗೆ ಹಾಗೂ ಮಧ್ಯವರ್ತಿಗಳ ಹಾವಳಿಗಳನ್ನು ತಪ್ಪಿಸುವ ಕುರಿತು ಸಂಬಂಧಪಟ್ಟ ಕಛೇರಿಗಳಿಗೆ ಮಾರ್ಗದರ್ಶನ ನೀಡಲು ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಸದರಿ ಸಭೆಯ ತೀರ್ಮಾನದಂತೆ ಕರಾವಳಿ ಭಾಗದಲ್ಲಿನ ವಿನ್ಯಾಸಗಳಿಗೆ ಅನುಮೋದನೆ ನೀಡುವ ಸಂಬಂಧ ಈ ಕೆಳಕಂಡಂತೆ ಮಾರ್ಗದರ್ಶನ ನೀಡಲಾಗಿದೆ.

**ಅ). ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರ ಭಾಗದಲ್ಲಿ ಗ್ರಾಮ ಪಂಚಾಯಿತಿಗಳು ಅನುಸರಿಸಬೇಕಾದ ಕ್ರಮಗಳು.**

I. ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರ ಭಾಗದಲ್ಲಿನ ಗ್ರಾಮ ಪಂಚಾಯತಿಗಳು ಅರ್ಜಿದಾರರಿಂದ ಈ ಕೆಳಕಂಡ ದಾಖಲೆಗಳನ್ನು ಪಡೆಯುವುದು.

1. ಪಹಣಿ ಪತ್ರಿಕೆ (RTC),
2. ಮ್ಯುಟೇಷನ್ ರಿಜಿಸ್ಟರ್ ಪ್ರತಿ (MR),
3. ಕ್ರಯಪತ್ರ ಅಥವಾ ಮಾಲೀಕತ್ವವನ್ನು ನಿರೂಪಿಸುವ ಯಾವುದೇ ನೋಂದಾಯಿತ ದಾಖಲೆಯ ಪ್ರತಿ.
4. ಋಣಭಾರ ರಾಹಿತ್ಯ ಪ್ರಮಾಣ ಪತ್ರ (Encumbrance Certificate).
5. **ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ (DSSLR) ರವರಿಂದ ಅರ್ಹ ಅಧಿಕಾರಿಗಳು ಪ್ರಮಾಣೀಕರಿಸಿರುವ ಸರ್ವೆ ನಕ್ಷೆ/ಅಟ್ಲಾಸ್/PT ಶೀಟ್ ನಲ್ಲಿ ಸದರಿ ಜಮೀನಿನ 'ಅ' ಖರಾಬು ಮತ್ತು 'ಬ' ಖರಾಬುಗಳು, ಪಥ, ಬಂಡಿದಾರಿ, ಸಹಜ ನೈಸರ್ಗಿಕ ಅಥವಾ ಮಾನವ ನಿರ್ಮಿತ ನಾಲೆಗಳು ಮತ್ತು ನಿವೇಶನದ 100.0ಮೀ. ವರೆಗೆ ವ್ಯಾಪ್ತಿಯಲ್ಲಿನ ಟ್ಯಾಂಕ್ ಕಟ್ಟೆ, ಕೆರೆ ಅಥವಾ ಸರೋವರಗಳು ವಿವರಗಳನ್ನು ಒಳಗೊಂಡಂತೆ ಸಂಪರ್ಕ ರಸ್ತೆ/ರಸ್ತೆಗಳ ಅಗಲದ ಮತ್ತು ಪ್ರಕಾರ/ವರ್ಗವನ್ನು ನಮೂದಿಸಿ, ನಿಗಧಿತ ಮಾಪನದಲ್ಲಿ ತಯಾರಿಸಿರುವ ಸರ್ವೆ ನಕ್ಷೆ.**
6. **ಭೂ ಪರಿವರ್ತನೆಯ ಆದೇಶದ ಪ್ರತಿ.**
7. **ಗ್ರಾಮ ನಕ್ಷೆ.**
8. **ಅವಶ್ಯವಿದ್ದಲ್ಲಿ ನೋಂದಾಯಿತ ಜಂಟಿ ಅಭಿವೃದ್ಧಿ ಪ್ರಮಾಣ ಪತ್ರ.**
9. ಉಲ್ಲೇಖ (1) ರ ಅಧಿಸೂಚನೆಯಲ್ಲಿ ನಿರ್ದೇಶಿಸಿರುವಂತೆ ಸ್ಥಳ ನಕ್ಷೆ ಹಾಗೂ ಪ್ರಶ್ನಿತ ಜಮೀನಿನ ಪ್ರಸ್ತಾವಿತ ವಿನ್ಯಾಸ ನಕ್ಷೆ.
10. ಅವಶ್ಯವಿದ್ದಲ್ಲಿ ಪುರಾತತ್ವ ಇಲಾಖೆ/ಕರಾವಳಿ ನಿಯಂತ್ರಣ ಪ್ರದೇಶ, ವಿಮಾನ ನಿಲ್ದಾಣ ಪ್ರದೇಶ, ನಿಯಂತ್ರಿತ ಪ್ರದೇಶದ ವ್ಯಾಪ್ತಿಯಲ್ಲಿನ ಜಮೀನುಗಳು ಸಂಬಂಧಿಸಿದ ಇಲಾಖೆಯಿಂದ ಪಡೆದ ನಿರಾಕ್ಷೇಪಣಾ ಪತ್ರ.
11. ಸ್ವಯಂ ಘೋಷಿತ ಪ್ರಮಾಣ ಪತ್ರ (ಪ್ರಶ್ನಿತ ಜಮೀನಿಗೆ ಸಂಬಂಧಿಸಿದ ಮಾಲೀಕತ್ವದ ಬಗ್ಗೆ, ದಾಖಲೆಗಳ ಧೃಢೀಕರಣ, ನ್ಯಾಯಾಲಯದಲ್ಲಿ ಯಾವುದೇ ದಾವೆ ಇಲ್ಲದಿರುವ ಬಗ್ಗೆ ಹಾಗೂ ಭೂಸ್ವಾಧೀನವಾಗದಿರುವ ಬಗ್ಗೆ, ಹಾಗೂ ಇತರೆ).

II. ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡದೇ ಇರುವ ಗ್ರಾಮ ಪಂಚಾಯತಿಗಳು ಉಲ್ಲೇಖ (2) ರ ಸರ್ಕಾರದ ಆದೇಶದ ಅಧಿಕಾರ ಪ್ರತ್ಯಾಯೋಜನೆಯನ್ವಯ ಮೇಲ್ಕಂಡಂತೆ ಕ್ರಮ ಸಂಖ್ಯೆ-(1) ಹಾಗೂ ಕೆ.ಟಿ.ಸಿ.ಪಿ. ಕಾಯ್ದೆ 1961 ರ ಕಲಂ 4-ಕೆ ರ ನಮೂನೆ-I ರಲ್ಲಿ ವಿವರಿಸಿರುವಂತೆ ದಾಖಲೆಗಳನ್ನು ಅರ್ಜಿದಾರರಿಂದ ಪಡೆದ ನಂತರ, ಉಲ್ಲೇಖ (2) ರಲ್ಲಿ ಸರ್ಕಾರದಿಂದ ಆದೇಶಿಸಿರುವಂತೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅಧಿಕಾರಿಗಳು ತಾಲ್ಲೂಕು ಪಂಚಾಯಿತಿಗೆ ಭೇಟಿ ನೀಡಿದ ಸಂದರ್ಭದಲ್ಲಿ, ಕೆ.ಟಿ.ಸಿ.ಪಿ. ಕಾಯ್ದೆ 1961 ರ ಕಲಂ 4-ಕೆ ರಂತೆ, ನಿಗಧಿತ ನಮೂನೆ-II ರಲ್ಲಿ ನೇರವಾಗಿ ಸಂಬಂಧಿಸಿದ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿಯ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು ಹಾಗೂ ಅರ್ಜಿದಾರರು ಅಪೂರ್ಣ ದಾಖಲೆಗಳೊಂದಿಗೆ ಪ್ರಸ್ತಾವನೆ

ಸಲ್ಲಿಸಿದ್ದಲ್ಲಿ, ಗ್ರಾಮ ಪಂಚಾಯತಿಯು ಸದರಿ ವಿನ್ಯಾಸ ಅನುಮೋದನ ಪ್ರಕರಣಗಳನ್ನು ಸ್ವೀಕರಿಸತಕ್ಕದ್ದಲ್ಲ.

**ಆ). ಸ್ಥಳೀಯ ಸಂಸ್ಥೆಗಳು/ಗ್ರಾಮ ಪಂಚಾಯಿತಿಗಳು ಏಕನಿವೇಶನ (01ಎಕರೆವರೆಗಿನ) ವಿನ್ಯಾಸ ನಕ್ಷೆ ಅನುಮೋದನೆಗೆ ವಹಿಸಬೇಕಾದ ಕ್ರಮಗಳು.**

**I. ವಸತಿ ಏಕನಿವೇಶನ**

1. ಯೋಜನಾ ಪ್ರಾಧಿಕಾರದಿಂದ/ಸಹಾಯಕ ನಿರ್ದೇಶಕರ ಕಛೇರಿಯಿಂದ ತಾಂತ್ರಿಕ ಅನುಮೋದನೆ ಸ್ವೀಕೃತವಾದ ನಂತರ ವಸತಿ ಏಕ ಘಟಕದ ವಿನ್ಯಾಸದಲ್ಲಿನ ರಸ್ತೆ/ರಸ್ತೆ ವಿಸ್ತರಣೆ ಜಾಗವನ್ನು ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಿಕೊಂಡು, ಕೆ.ಟಿ.ಸಿ.ಪಿ. ಕಾಯ್ದೆ 1961 ರ ಕಲಂ 4-ಕೆ ರ ನಿಯಮಾವಳಿಗಳಂತೆ ಮುಂದಿನ ಕ್ರಮ ವಹಿಸತಕ್ಕದ್ದು.

**II. ವಸತಿಯೇತರ ಏಕನಿವೇಶನ**

1. ಯೋಜನಾ ಪ್ರಾಧಿಕಾರದಿಂದ/ಸಹಾಯಕ ನಿರ್ದೇಶಕರ ಕಛೇರಿಯಿಂದ ತಾಂತ್ರಿಕ ಅನುಮೋದನೆ ಸ್ವೀಕೃತವಾದ ನಂತರ ವಸತಿ ಏಕ ಘಟಕದ ವಿನ್ಯಾಸದಲ್ಲಿನ ರಸ್ತೆ ವಿಸ್ತರಣೆ ಜಾಗವನ್ನು ಅರ್ಜಿದಾರರಿಂದ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಿಕೊಂಡು, ಉಳಿದಂತೆ ಉದ್ಯಾನವನ, ನಾಗರೀಕ ಸೌಲಭ್ಯ, ವಾಹನ ನಿಲುಗಡೆ , ಸಾರ್ವಜನಿಕ ಉಪಯುಕ್ತತೆ, ಜಾಗಗಳನ್ನು ಜಮೀನಿನ ಮಾಲೀಕರೇ ಅಭಿವೃದ್ಧಿಡಿಸಿ ಅದೇ ಉಪಯೋಗಕ್ಕೆ ಕಾಯ್ದಿರಿಸಿ ನಿರ್ವಹಿಸುವ ಷರತ್ತಿಗೊಳಪಡಿಸಿ, ಕೆ.ಟಿ.ಸಿ.ಪಿ. ಕಾಯ್ದೆ 1961 ರ ಕಲಂ 4-ಕೆ ರ ನಿಯಮಾವಳಿಗಳಂತೆ ಮುಂದಿನ ಕ್ರಮ ವಹಿಸತಕ್ಕದ್ದು

**ಇ.) ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿಗಳು ವಹಿಸಬೇಕಾದ ಕ್ರಮ.**

I. ಗ್ರಾಮ ಪಂಚಾಯಿತಿಯಿಂದ Demarcation/ತಾತ್ಕಾಲಿಕ/ಅಂತಿಮ ಅನುಮೋದನೆಗೆ ಸ್ವೀಕೃತವಾದ ಪ್ರಸ್ತಾವನೆಗಳಲ್ಲಿ, (ಅ) (1) ರಲ್ಲಿ ಹಾಗೂ ಕೆ.ಟಿ.ಸಿ.ಪಿ. ಕಾಯ್ದೆ 1961 ರ ಕಲಂ 4-ಕೆ ರ ನಮೂನೆ-I ರಲ್ಲಿ ವಿವರಿಸಿರುವಂತೆ ದಾಖಲೆಗಳನ್ನು ಸಲ್ಲಿಸಿರುವ ಬಗ್ಗೆ ಪರಿಶೀಲಿಸಿಕೊಳ್ಳತಕ್ಕದ್ದು.ಅಪೂರ್ಣವಾದ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ, ಅಂತಹ ದಾಖಲೆಗಳನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ಸಲ್ಲಿಸಲು ಸೂಚಿಸತಕ್ಕದ್ದು. ಸದರಿ ಮಾಹಿತಿಯ ಪ್ರತಿಯನ್ನು ಅರ್ಜಿದಾರರಿಗೆ ಕಳುಹಿಸತಕ್ಕದ್ದು ಹಾಗೂ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆ/ ಗ್ರಾಮ ಪಂಚಾಯಿತಿಯೊಡನೆ ಪತ್ರ ವ್ಯವಹರಿಸತಕ್ಕದ್ದು.

II. ಗ್ರಾಮ ಪಂಚಾಯಿತಿಯಿಂದ Demarcation/ತಾತ್ಕಾಲಿಕ/ಅಂತಿಮ ಅನುಮೋದನೆಗೆ ಸಂಪೂರ್ಣ ದಾಖಲೆಗಳೊಂದಿಗೆ ಸ್ವೀಕೃತವಾದ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಸ್ಥಳ ಪರಿಶೀಲನೆ ಕೈಗೊಂಡು ಕೆ.ಟಿ.ಸಿ.ಪಿ. ಕಾಯ್ದೆ 1961 ರ ಕಲಂ 4-ಕೆ ರಂತೆ ಉಲ್ಲೇಖ (1) ರ ಅಧಿಸೂಚನೆಯಲ್ಲಿ ನಿರ್ದೇಶಿಸಿರುವಂತೆ ನಿಯಮಾನುಸಾರವಿರುವ ಬಗ್ಗೆ ಪರಿಶೀಲಿಸಿ, ವಿನ್ಯಾಸ ನಕ್ಷೆಯಲ್ಲಿ ಮಾರ್ಪಾಡುಗಳಿದ್ದಲ್ಲಿ ನೇರವಾಗಿ ಅರ್ಜಿದಾರರಿಗೆ ಸೂಚಿಸುವುದು, ಅಥವಾ ನಿಯಮಾನುಸಾರವಿರುವ ವಿನ್ಯಾಸ ನಕ್ಷೆಗಳಿಗೆ ಸಹಾಯಕ ನಿರ್ದೇಶಕರುಗಳು ವಿಳಂಬಕ್ಕೆ ಆಸ್ಪದ ನೀಡದೇ, ನಿಗಧಿತ 60 ದಿನಗಳ ಅವಧಿಯಲ್ಲಿ ಪ್ರಕರಣಗಳನ್ನು ತಾಂತ್ರಿಕ

ಅನುಮೋದನೆ/ಇತ್ಯರ್ಥಗೊಳಿಸಿ, ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ಹಿಂದಿರುಗಿಸುವುದು.

III. ತಿರಸ್ಕರಿಸುವ ಪ್ರಸ್ತಾವನೆಗಳನ್ನು ಶೀಘ್ರವಾಗಿ ಗ್ರಾಮ ಪಂಚಾಯಿತಿಗಳಿಗೆ ಹಿಂದಿರುಗಿಸತಕ್ಕದ್ದು ಹಾಗೂ ಸದರಿ ಮಾಹಿತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸತಕ್ಕದ್ದು.

IV. ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ವಿಭಾಗೀಯ/ಶಾಖಾ ಕಛೇರಿ/ ಕಛೇರಿಗಳಲ್ಲಿ, "ಮಧ್ಯವರ್ತಿಗಳಿಗೆ/ ಅನ್ಯವ್ಯಕ್ತಿಗಳಿಗೆ ಪ್ರವೇಶವಿರುವುದಿಲ್ಲ" ಎಂಬ ಸೂಚನಾ ಫಲಕವನ್ನು ಕಛೇರಿಯಲ್ಲಿ ಕಡ್ಡಾಯವಾಗಿ ಅಳವಡಿಸತಕ್ಕದ್ದು.

ಮೇಲ್ಕಂಡ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಸಂಬಂಧಿಸಿದ ಅಧಿಕಾರಿಗಳು ಪಾಲಿಸತಕ್ಕದ್ದು. ತಪ್ಪಿದ್ದಲ್ಲಿ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ.

**ಇವರಿಗೆ:**

1. ಆಯುಕ್ತರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಕೇಂದ್ರ ಕಚೇರಿ, ಬೆಂಗಳೂರು,
3. ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ವಲಯ ಕಚೇರಿ ಧಾರವಾಡ.
4. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ವಿಭಾಗೀಯ ಕಚೇರಿ, ಬೆಂಗಳೂರು, ಮೈಸೂರು, ಕಲಬುರಗಿ,
5. ರಾಜ್ಯದ ಎಲ್ಲಾ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರುಗಳು
6. ನಗರ ಯೋಜಕ ಸದಸ್ಯರು ಹಾಗೂ ಸದಸ್ಯ ಕಾರ್ಯದರ್ಶಿಗಳು, ರಾಜ್ಯದ ಎಲ್ಲಾ ನಗರಾಭಿವೃದ್ಧಿ / ಯೋಜನಾ ಪ್ರಾಧಿಕಾರಗಳು,
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಪ್ರತಿ:

1. ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ ರವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ವಿಕಾಸಸೌಧ, ಬೆಂಗಳೂರು.